158ನೇ ಮಾ ಉ SL NO:-07 09/03/26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ, ಕೊಪ್ಪಳ ಜಿಲ್ಲೆ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

ವಿಷಯ:- ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶಕಲ್ಪಿಸಿ ಕೊಡುವ ಕುರಿತು.

ದಿನವೂ ನಿಮ್ಮೊಂದಿಗೆ ಸುದ್ದಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ. ದ್ವಿತೀಯ ಪಿ.ಯು.ಸಿ । ಉರ್ದು ಪರೀಕ್ಷೆಗೆ ಒಬ್ಬಳೇ ವಿದ್ಯಾರ್ಥಿನಿ, ಪರೀಕ್ಷೆಗೆ ಹಾಜರಾಗದಂತೆ ಒತ್ತಡ. ಕೊಪ್ಪಳ ಸಂಸದ ಅವರ ಕನಸಿನ ಕೂಸಾಗಿರುವ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ಕೆಲ ಉತ್ಸಾಹಿಗಳು, ಮಾರ್ಚ4 ಬುಧವಾರದಂದು ಈ ಪರೀಕ್ಷೆಗೆ ಹಾಜರಾಗದಂತೆ ಪಿ.ಯು.ಸಿ ದ್ವಿತೀಯ ವರ್ಷದ ಪರೀಕ್ಷಾ ಅಭ್ಯರ್ಥಿಯೊಬ್ಬರಿಗೆ ಒತ್ತಡ ಹೇರಿರುವ ಆರೋಪಗಳು ಕೇಳಿಬಂದಿವೆ. ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ವತಿಯಿಂದ ಎರಡನೇ ವರ್ಷ, ಕೊಪ್ಪಳ ನಗರದ ತಾಲೂಕು ಕ್ರೀಡಾಂಗಣದಲ್ಲಿ ಮಾರ್ಚ4 ಬುಧವಾರದಂದು ಸಾರ್ವಜನಿಕ ಹೋಳಿ ಆಚರಣೆಗೆ ವೇದಿಕೆ ಸಿದ್ಧವಾಗಿದೆ. ಆದರೆ, ಪಿಯುಸಿ ಪರೀಕ್ಷೆ ಮುಗಿದ ನಂತರವಷ್ಟೇ ಹೋಳಿ ಆಚರಣೆ ಅವಕಾಶ ಎಂದು ಜಿಲ್ಲಾಧಿಕಾರಿಗಳು ಕಾರ್ಯಕ್ರಮದ ಆಯೋಜಕರಿಗೆ ಸ್ಪಷ್ಟಪಡಿಸಿದ್ದಾರೆ.

ಪರೀಕ್ಷೆ ಮುಗಿಯುವುದು ಮಧ್ಯಾಹ್ನ 1 ಗಂಟೆಗೆ, ಆದಾದ ನಂತರ ಹೋಳಿ ಆಚರಣೆಗೆ ಉತ್ಸಾಹ ಉಳಿಯದು ಎಂಬ ಆತಂಕ ಆಯೋಜಕರದ್ದು. ಅವರ ಅದೃಷ್ಟಕ್ಕೋ ಅಥವಾ ಅಭ್ಯರ್ಥಿಯ ದುರಾದೃಷ್ಟಕ್ಕೋ, ಮಾರ್ಚ 4 ರಂದು ತಾಲೂಕು ಕ್ರೀಡಾಂಗಣ ಸಮುಚ್ಚಯದಲ್ಲಿರುವ ಪರೀಕ್ಷಾ ಕೇಂದ್ರದಲ್ಲಿ ಉರ್ದು ಭಾಷೆಯ ಪರೀಕ್ಷೆ ಇದೆ. ಕೇವಲ ಒಬ್ಬಳೇ ವಿದ್ಯಾರ್ಥಿನಿ ಈ ಪರೀಕ್ಷೆಯನ್ನು ಬರೆಯಬೇಕಿದೆ. ಆದರೆ, ಒಬ್ಬರಿರಲಿ ಎಷ್ಟೇ ಸಂಖ್ಯೆಯ ಅಭ್ಯರ್ಥಿಗಳಿರಲಿ, ಪಿಯು ಪರೀಕ್ಷೆ ನಡೆಸುವುದು ಖಚಿತ, ಪ್ರತಿಯೊಂದು ಪರಿಕ್ಷಾ ಕೇಂದ್ರದಲ್ಲಿಯೂ, ಬೆಳಗ್ಗೆ 10ಕ್ಕೆ ಪರೀಕ್ಷೆ ಒಂದೊಮ್ಮೆ ಪ್ರಾರಂಭವಾಗುತ್ತದೆ. ಯಾರಾದರೂ ತಡವಾದರೆ, ಅಂಥವರಿಗೆ ಹತ್ತೂವರೆ ಒಳಗೆ ಬಂದರೆ, ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತದೆ. ಬುಧವಾರ ಉರ್ದಿ ಪರೀಕ್ಷೆ ಬರೆಯಬೇಕಿರುವ ಏಕೈಕ ವಿದ್ಯಾರ್ಥಿನಿ ಏನಾದರೂ ಗೈರುಹಾಜರಾದರೆ, ಹತ್ತೂವರೆವರೆಗೆ ಕಾಯ್ದು ಪರೀಕ್ಷಾ ಕೇಂದ್ರದ ಅಧಿಕಾರಿಗಳು ಕೇಂದ್ರಕ್ಕೆ ಬೀಗ ಹಾಕಿಕೊಂಡು ಹೋಗುತ್ತಾರೆ.

ಆದ್ದರಿಂದ. ವಿದ್ಯಾರ್ಥಿನಿಯನ್ನು ಬರೆಯದಂತೆ ತಡೆದುಬಿಟ್ಟರೆ. ಬುಧವಾರ ಬೆಳಗ್ಗೆ ಹತ್ತೂವರೆಯಿಂದಲೇ ಆಚರಣೆ ಪ್ರಾರಂಭಿಸಬಹುದು ಎಂಬುದು ಕೆಲ ಉತ್ಸಾಹಿಗಳ ಲೆಕ್ಕಾಚಾರ. ಈ ಕಾರಣಕ್ಕಾಗಿ ಅವರು ಸದರಿ ವಿದ್ಯಾರ್ಥಿನಿಯ ಮೇಲೆ ಒತ್ತಡ ಹೇರಿರುವುದಾಗಿ ಆರೋಪಗಳು ಕೇಳಿಬಂದಿವೆ. ಈ ಕುರಿತು ಪತ್ರಿಕೆ ವಿಚಾರಿಸಿದ್ದಕ್ಕೆ ಹಿರೇಸಿಂದೋಗಿ ಸರಕಾರಿ ಪಿ.ಯು ಕಾಲೇಜಿನ ಈ ವಿದ್ಯಾರ್ಥಿನಿ ಅಲಿಯಾ ಆಮೀರ್ ಹಮ್ಮಾ ಕುಟುಂಬದ ಸದಸ್ಯರೊಬ್ಬರು ಪರೀಕ್ಷೆಗೆ ಗೈರುಹಾಜರಾಗುವಂತೆ ಕೆಲವರು ತಮ್ಮಲ್ಲಿ ವಿನಂತಿಸಿಕೊಂಡಿದ್ದನ್ನು ದೃಢಪಡಿಸಿದರು. ಹೇಗಿದ್ದರೂ ಇನ್ನೂ ಎರಡು ಅವಕಾಶಗಳು ಇರುತ್ತವೆ. ಬರೆದರಾಯಿತು. ಕಾರ್ಯಕ್ರಮವಾಗಿದ್ದು, ವಿದ್ಯಾರ್ಥಿನಿಯ ಸಲುವಾಗಿ ಮಧ್ಯಾಹ್ನ ದವರೆಗೂ ಕಾಯುವಂತಾಗಬಾರದು' ಎಂದು ವಿನಂತಿಸಿದ್ದಾಗಿ ಹೇಳಿದ್ದಾರೆ.
ಈ ಬಗ್ಗೆ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಉತ್ತರ:-**

ದ್ವಿತೀಯ ಪಿಯುಸಿ ಪರೀಕ್ಷೆ-1 ರ ವೇಳಾಪಟ್ಟಿಯಂತೆ ದಿನಾಂಕ: 04.03.2026 ರಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್ ಭಾಷಾ ವಿಷಯಗಳ ಪರೀಕ್ಷೆಯನ್ನು ಬೆಳಿಗ್ಗೆ: 10:00 ಗಂಟೆಯಿಂದ ಮಧ್ಯಾಹ್ನ: 1:00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ.

...2

ಸದರಿ ದಿನದಂದು ಪರೀಕ್ಷಾ ಕೇಂದ್ರ ಸಂಖ್ಯೆ: XC 5511, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಪ್ಪಳ (RK0025) ಈ ಪರೀಕ್ಷಾ ಕೇಂದ್ರದಲ್ಲಿ ಉರ್ದು ಭಾಷಾ ವಿಷಯಕ್ಕೆ ಒರ್ವ ವಿದ್ಯಾರ್ಥಿಯು ಹಂಚಿಕೆಯಾಗಿರುತ್ತದೆ. ಸದರಿ ವಿದ್ಯಾರ್ಥಿಯ ನೋಂದಣಿ ಸಂಖ್ಯೆ: 20269635286 ಇದ್ದು, ಈ ವಿದ್ಯಾರ್ಥಿಯು ಪರೀಕ್ಷಾ ದಿನದಂದು ಪರೀಕ್ಷೆಗೆ ಗೈರುಹಾಜರಾಗಿರುವುದು ಪರೀಕ್ಷಾ ಕೇಂದ್ರದ ದಾಖಲೆಗಳು ಹಾಗೂ ಮಂಡಲಿಯ ಆನ್‌ಲೈನ್ ಪೋರ್ಟಲ್‌ನಲ್ಲಿ ನಮೂದಾಗಿರುವ ದಾಖಲೆಗಳಿಂದ ಕಂಡುಬಂದಿರುತ್ತದೆ.

ಸದರಿ ವಿದ್ಯಾರ್ಥಿಯು ಹಂಚಿಕೆಯಾದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಹಾಗೂ ಇತರೆ ಎಲ್ಲಾ ಪರೀಕ್ಷಾ ಕೇಂದ್ರಕ್ಕೆ ನೇಮಿಸಲಾದ ಅಧಿಕಾರಿ/ಸಿಬ್ಬಂದಿಗಳು ಸದರಿ ಪರೀಕ್ಷಾ ದಿನದಂದು ವೇಳಾಪಟ್ಟಿಯಂತೆ ಪರೀಕ್ಷಾ ಸಮಯ ಮುಗಿಯುವವರೆವಿಗೂ ಪರೀಕ್ಷಾ ಕೇಂದ್ರದಲ್ಲಿಯೇ ಹಾಜರಿದ್ದು, ಪರೀಕ್ಷಾ ಪೂರ್ವ ಹಾಗೂ ನಂತರದ ಕಾರ್ಯಗಳನ್ನು ನಿರ್ವಹಿಸಿ ಗೈರುಹಾಜರಾದ ವಿದ್ಯಾರ್ಥಿಯ ಅಂಕಪಟ್ಟಿಯುಳ್ಳ ಲಕೋಟೆಯನ್ನು ಹಾಗೂ ಬಂಡಲ್‌ಗಳನ್ನು ನಿಯಮಾನುಸಾರ ನಿಗದಿತ ಅಂಚೆ ಕಛೇರಿಗೆ ಮಂಡಲಿಯ ಮಾರ್ಗಸೂಚಿಯನ್ವಯ ನೀಡಿ ಸ್ವೀಕೃತಿ ಪಡೆದಿರುವುದಾಗಿ ಹಾಗೂ ಸದರಿ ಪರೀಕ್ಷಾ ದಿನದಂದು ವಿದ್ಯಾರ್ಥಿಯು ಪರೀಕ್ಷೆಗೆ ಗೈರುಹಾಜರಾದ ಬಗ್ಗೆ ಕಾರಣ ತಿಳಿದಿರುವುದಿಲ್ಲವೆಂದು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ತಿಳಿಸಿರುತ್ತಾರೆ.

ಸಂಖ್ಯೆ: ಇಪಿ 105 ಡಿಜಿಡಬ್ಲೂ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು